# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 461/2012

ಡಿ ಡಬ್ಲ್ಯೂ -5

**ದಿನಾಂಕ 02-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಸಿ.ಆರ್.ಎಲ್. ವಾದಿ ಪರ ವಕೀಲರುಃ**

ನಾನು ಪ್ರತಿವಾದಿಗಳ ಪರವಾಗಿ ಸಾಕ್ಷಿಯನ್ನು ನುಡಿಯಲು ಬಂದಿದ್ದೇನೆ. ಈ ದಾವೆಯನ್ನು ಜಮೀನಿನ ಸಲುವಾಗಿ ಸಲ್ಲಿಸಿದ್ದಾರೆ. ನನಗೆ ವಾದಿಗಳ ತಂದೆ ವೆಂಕಟೇಗೌಡ ಪರಿಚಯ ಇಲ್ಲ. ನಾನು ಗುಳುವಿನಅತ್ತಿಗುಪ್ಪೆ ಗ್ರಾಮದ ವಾಸಿ ಎಂದರೆ ಸರಿ. ಅದೇ ರೀತಿ ವಾದಿಗಳು ಮುಂಜನಹಳ್ಳಿ ಗ್ರಾಮದವರು ಎಂದರೆ ಸರಿ. ನಾವು ಗೋವಿಂದೆಗೌಡರ ಬೀಗರು ಎಂದರೆ ಸರಿ.

2. ದಾವಾ ಸ್ವತ್ತು ವಾದಿಗಳಿಗೆ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸ್ವಯಾರ್ಜಿತ ಸ್ವತ್ತು. ಈ ಕುರಿತು ನಾನು ಮರಣ ಶಾಸನವನ್ನು ನೋಡಿರುತ್ತೇನೆ. ಸದರಿ ಮರಣ ಶಾಸನ ಪತ್ರವು 2000 ನೇ ಇಸವಿಯಲ್ಲಿ ಬರೆದಿರುತ್ತಾರೆ. ಸದರಿ ಮರಣ ಶಾಸನ ಪತ್ರಕ್ಕೆ ನಾನು, ನಂಜುಂಡೆಗೌಡ ಮತ್ತು ಮಂಜೇಗೌಡರವರು ಸಹಿಯನ್ನು ಮಾಡಿರುತ್ತೇವೆ. 6 ನೇ ಪ್ರತಿವಾದಿ ಗೋವಿಂದೇಗೌಡರು ಪ್ರಸ್ತುತ ಆರೋಗ್ಯ ಸರಿಯಿಲ್ಲ.

3. ನನ್ನ ಪ್ರಮಾಣ ಪತ್ರದಲ್ಲಿನ ವಿಷಯಗಳನ್ನು ವಕೀಲರು ಬರೆಸಿರುತ್ತಾರೆ. ವಾದಿಗಳು ಒಟ್ಟು ಕುಟುಂಬದಲ್ಲಿ ಮುಂಜನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಎಲ್ಲರೂ ಮುಂಜನಹಳ್ಳಿಯಲ್ಲಿಯೇ ಪ್ರತ್ಯೇಕವಾಗಿ ವಾಸವಾಗಿದ್ದರು. ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವಿಭಾಗವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

4. ಅರಕೆರೆ ಗ್ರಾಮದ ಸರ್ವೆ ನಂಬರ 52 ರ ಜಮೀನಿನ ಕ್ರಯಪತ್ರವನ್ನು ನಾನು ನೋಡಿದ್ದೇನೆ. ಸರ್ವೆ ನಂಬರ 52 ರಲ್ಲಿ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. 2 ಎಕರೆಯನ್ನು ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿರುವ ಮಾಹಿತಿ ನನಗೆ ಗೊತ್ತು. ಸದರಿ ಜಮೀನು ವಿಲ್

ನ ಮುಖಾಂತರ ಬಂದಿದ್ದು ಅದನ್ನು ಕ್ರಯಪತ್ರ ಮಾಡಿಕೊಟ್ಟಿದ್ದು ಈ ಕುರಿತು ಕ್ರಯ ಪತ್ರದಲ್ಲಿ ನಮೂದಾಗಿದೆ. ಸದರಿ ಕ್ರಯಪತ್ರದಲ್ಲಿ ಪಿತ್ರಾರ್ಜಿ ಸ್ವತ್ತು ಎಂದು ನಮೂದಾಗಿದೆ ಎಂದರೆ ಸರಿಯಲ್ಲ.

5. ಸದರಿ ಸ್ವತ್ತು ವೆಂಕಟೇಗೌಡ ಸ್ವಯಾರ್ಜಿತ ಸ್ವತ್ತಾಗಿದ್ದು ಮಗನಿಗೆ ಮರಣ ಶಾಸನ ಪತ್ರವನ್ನು ಬರೆದು ಕೊಟ್ಟಿರುತ್ತಾರೆ. ವೆಂಕಟೇಗೌಡರು ಜೀವಂತವಾಗಿದ್ದಾಗಲೇ ವಿಲ್ ನ ಪ್ರಕಾರ ರಾಜೇಗೌಡರು ಖಾತೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ವಿಲ್ ಮಾತ್ರ ಆಗಿರುತ್ತದೆ. ಸದರಿ ವಿಲ್ ನೊಂದಣಿಯಾಗಿದೆ. ಸದರಿ ವಿಲ್ ನ ಸರ್ವೆ ನಂಬರ್ ಚೆಕ್ ಬಂದಿ ನನಗೆ ಗೊತ್ತಿಲ್ಲ.

6. ಪ್ರತಿವಾದಿಗಳು ಸರ್ಕಾರದಿಂದ ಬೋರ್ ವೆಲ್ ನ್ನು ಪಡೆದು ಹಾಕಿಸಿರುತ್ತಾರೆ ಆ ಕುರಿತು ದಾಖಲೆಯನ್ನು ನಾನು ನೋಡಿರುವುದಿಲ್ಲ. ಕ್ರಯಪತ್ರವನ್ನು ಬರೆದ ನಂತರ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ. ಕ್ರಯ ಪತ್ರ ನೋಂದಣಿಯಾದ ಸಮಯ ನನಗೆ ಗೊತ್ತಿಲ್ಲ. ಕ್ರಯ ಪತ್ರವನ್ನು ಅಂಕನ ಹಳ್ಳಿಯ ಕೃಷ್ಣೆಗೌಡ ಬರೆದಿರುತ್ತಾರೆ. ಅವರು ಜೀವಂತವಾಗಿದ್ದಾರೋ ಇಲ್ಲಮೋ ನನಗೆ ಗೊತ್ತಿಲ್ಲ.

7. ಸದರಿ ಕ್ರಯ ಪತ್ರವನ್ನು ಅಂಕನ ಹಳ್ಳಿಯ ಕೃಷ್ಣೆಗೌಡರ ಕಚೇರಿಯಲ್ಲಿಯೇ ತಯಾರು ಮಾಡಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ರಾಜೇಗೌಡರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಗಂಡು ಮಗ ಇದ್ದು ಆ ಸಮಯದಲ್ಲಿ ಅವರು ಅಪ್ರಾಪ್ತರಾಗಿದ್ದು ಸದರಿ ವಿಚಾರವನ್ನು ಕ್ರಯ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಸಮಯದಲ್ಲಿ ರಾಜೇಗೌಡರ ಹೆಣ್ಣುಮಕ್ಕಳು ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿಯಲ್ಲ.

8. ಸದರಿ ಕ್ರಯ ಪತ್ರದ ಕುರಿತು ರಾಜೇಗೌಡರ ಹೆಂಡತಿಮಕ್ಕಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ರಾಜೇಗೌಡರು ಭೇರ್ಯ ಬ್ಯಾಂಕ್ ನಲ್ಲಿ ಮಾಡಿದ ಬೆಳೆ ಸಾಲವನ್ನು ತೀರಿಸಲು ಕ್ರಯ ಪತ್ರವನ್ನು ಮಾಡಿರುತ್ತಾರೆ. ಸದರಿ ದಾಖಲೆಗಳನ್ನು ನಾವು ನೋಡಿಲ್ಲ. ಸದರಿ ಕ್ರಯಪತ್ರವು 64,000/- ರೂಪಾಯಿಗೆ ತೀರ್ಮಾನವಾಗಿರುತ್ತದೆ. ಸದರಿ ಹಣವನ್ನು

ರಾಜೇಗೌಡರು ಮಾತ್ರ ಪಡೆದಿದ್ದಾರೆ ಎಂದರೆ ಸರಿ. ಸದರಿ ಹಣವನ್ನು ಅವರ ವೈಯಕ್ತಿಕ ಉಪಯೋಗಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

9. ರೂ 64,000/- ಹಣವನ್ನು ಗೋವಿಂದೆಗೌಡ ಮನೆಯಿಂದ ತಂದು ಕೊಟ್ಟಿರುತ್ತಾರೆ. ಗೋವಿಂದೆಗೌಡರು ರಾಜೇಗೌಡರಿಗೆ ಸಾಲವನ್ನು ಕೊಟ್ಟಿದ್ದರೋ ಇಲ್ಲಮೋ ನನಗೆ ಗೊತ್ತಿಲ್ಲ. ಕ್ರಯ ಪತ್ರವಾದಾಗ ನಾನು ರೆವಿನ್ಯೂ ದಾಖಲೆಗಳನ್ನು ನಾನು ನೋಡಿಲ್ಲ. ನಾನು ಗೊವಿಂದೆಗೌಡ ಸಂಬಂಧಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನಗೆ ಕ್ರಯಪತ್ರವಾದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ರಾಜೇಗೌಡರು ವಾಣಿಜ್ಯ ಬೆಳೆಯನ್ನು ಬೇರೆ ಜಮೀನಿಗೆ ಹಾಕಿದ್ದರು. ನಾವು ಎಲ್ಲರುಾ ಸೇರಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸಿರುವ ದಿನಾಂಕ ನನಗೆ ಗೊತ್ತಿಲ್ಲ. ನನಗೆ ಸದರಿ ಜಮೀನಿನ ಪ್ರಸ್ತುತ ಬೆಲೆ ಗೊತ್ತಿಲ್ಲ. ಕ್ರಯಪತ್ರವಾದಾಗ ಸದರಿ ಜಮೀನು ರೂ 64,000/-ಗೆ ಬೆಲೆಬಾಳುತ್ತಿತ್ತು.

11. ಸದರಿ ಜಮೀನು ಪ್ರಸ್ತುತ 30 ಲಕ್ಷಕ್ಕಿಂತ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ರೂ 64,000/- ನನ್ನ ವೈಯಕ್ತಿಕ ಮಾಹಿತಿ ಎಂದರೆ ಸರಿ. ಕ್ರಯ ಪತ್ರವನ್ನು ಮಾಡುವ ಕಾಲದಲ್ಲಿ ವಾದಿಗಳೆಲ್ಲ ಒಟ್ಟಿಗೆ ಇದ್ದರು. ವೆಂಕಟೆಗೌಡರ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ. ನನಗೆ ಕ್ರಯ ಪತ್ರದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವಾದಿಗಳಿಗೆ ಸಹಾಯ ಮಾಡಲು ಸುಳ್ಳುಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ